ಕಣ್ಣು ಗುಡ್ಡೆ ಮೇಲೆ ಸಿಕ್ಕಿದೆ' ಹೆಂಡತಿ ಹೇಳಿದ್ದನ್ನು ಕೇಳಿ ಗಾಬರಿಗೊಂಡ ಶಂಕರ ಕೆಸರು ಮೆತ್ತಿಕೊಂಡಿದ್ದ ಕಾಲುಗಳನ್ನು ತೊಳೆದುಕೊಳ್ಳುವುದನ್ನೂ ಮರೆತು ಅಪ್ಪನ ರೂಮಿಗೆ ಓಡಿದ್ದ. ಹೌದು. ಅಪ್ಪನ ಬಾಯಿಯಲ್ಲಿ ನೊರೆ. ನಾಲಿಗೆ ತುಸುವೇ ಹೊರ ಚಾಚಿತ್ತು. ಕಣ್ಣು ಗುಡ್ಡೆ ಹೊರ ಬಂದಿತ್ತು. ಗಾಬರಿಯಿಂದ ಮೂಗಿನ ಹತ್ತಿರ ಕೈ ಹಿಡಿದು ನೋಡಿದರೆ ಉಸಿರಾಟದ ಕುರುಹೂ ಇಲ್ಲ. ಖಾತ್ರಿಯಾಗಿತ್ತು. ಅಪ್ಪ ಸತ್ತು ಹೋಗಿದ್ದ. ಇವ ಗೋಳೋ ಎಂದು ಅಳುತ್ತ ಅಪ್ಪನ ಬಾಯಿಯ ಸುತ್ತ ಸುರಿದಿದ್ದ ನೊರೆಯನ್ನು ನಾಜೂಕಾಗಿ ಒರೆಸಿ ಹೆಂಡತಿಗೆ ಹೇಳಿದ್ದ 'ಬಾಯಿಯಲ್ಲಿ ನೊರೆ ಬಂದ ಸುದ್ದಿಯನ್ನು ಯಾರಿಗೂ ಹೇಳುವುದು ಬೇಡ' ಎಂದು. ಈಗ ಹೆಂಡತಿಯೂ ಗಂಡನೊಂದಿಗೆ ಸೇರಿ ಅಳಲು ಸುರು ಮಾಡಿದ್ದರು. ಅವರಿಬ್ಬರ ಅಳು ಕೇಳಿದ ಮನೆಯ ಹೊರ ಕೆಲಸದ ಸೀತಮ್ಮ ಅದೆಲ್ಲೋ ಹೊರಗಡೆ ಇದ್ದವಳು ಓಡಿ ಬಂದಿದ್ದಳು. ಅಳುವ ಇವರನ್ನು ಮತ್ತು ಅಲುಗಾಡದೆ ಮಲಗಿದ್ದ ದೊಡ್ಡೆಜಮಾನರನ್ನು ನೋಡಿದ ಆಕೆ ಗರಬಡಿದವಳಂತಾದರೂ ಕ್ಷಣದಲ್ಲೇ ಸುಧಾರಿಸಿಕೊಂಡು ಹೊರಗೋಡಿದ್ದಳು ಇತರರಿಗೆ ಸುದ್ದಿ ಮುಟ್ಟಿಸಲು. ಸುದ್ದಿ ಕೇಳಿದ ಅಕ್ಕ ಪಕ್ಕದವರು ಓಡೋಡಿ ಬಂದಿದ್ದರು.

ಅಪ್ಪನ ದೇಹದ ಮೇಲೆ ಬಿದ್ದು ಎದೆ ಎದೆ ಬಡಿದುಕೊಂಡು ಅಳುತ್ತಿದ್ದ ಶಂಕರ. ಜನ ಸಾಂತ್ವನಪಡಿಸಲು ಪ್ರಯತ್ನಿಸಿದಷ್ಟೂ ಅಳು ಹೆಚ್ಚುತ್ತಿತ್ತು. 'ಪಾಪ ಅಪ್ಪ ಮಗ ಎಷ್ಟು ಚೆನ್ನಾಗಿ ಸ್ನೇಹಿತರ ಹಾಗಿದ್ದರು.. ಪಾಪ ಅದೇನು ಬಂತೋ.. ' ಎಂದು ಒಬ್ಬರೆಂದರೆ ಇನ್ನೊಬ್ಬರು 'ಹೋಗಲಿ ಸ್ವಲ್ಪ ಅತ್ತಾದರೂ ಹಗುರ ಮಾಡಿ ಕೊಳ್ಳಲಿ..' ಎಂದಿದ್ದರು.

ಅತ್ತು ಅತ್ತು ತನಗೆ ತಾನೇ ಸಮಾಧಾನ ಮಾಡಿಕೊಂಡ ಶಂಕರ 'ತಮ್ಮನಿಗೊಂದು ಫೋನ್ ಮಾಡಿ ಬಿಡುತ್ತೇನೆ' ಎಂದು ಮೊಬೈಲ್ ತೆಗೆದು ಕೊಂಡಿದ್ದ. ಉಮ್ಮಳಿಸಿ ಬರುತ್ತಿದ್ದ ದುಃಖದಿಂದಾಗಿ ಮಾತು ತಡೆ ತಡೆದು ಬರುತ್ತಿತ್ತು. ತಮ್ಮನಿಗೆ ವಿಷಯ ತಿಳಿಸಿ ಫೋನ್ ಇಟ್ಟವನೇ ಕುಸಿದು ಕುಳಿತಿದ್ದ. ನೆರೆದವರು ಧಾವಿಸಿದ್ದರು ಅವನನ್ನು ಸಂತೈಸಲು.

ತುಸು ಸಮಾಧಾನವಾಗಿದ್ದೇ ಅಪ್ಪನ ಶವದೆಡೆಗೆ ಹೋದವ ನೀಲಿಗಟ್ಟುತ್ತಿದ್ದ ಮೈ ಕೈಗಳನ್ನು ಕಂಡು  ಹೌಹಾರಿದ್ದ. ಜನ ಕೇಳಿದ್ದರು 'ತಮ್ಮ ಯಾವಾಗ ಬರುತ್ತಾನೆ' ಎಂದು. ಹೆಣ ತೆಗೆಯಲು ಅವ ಬರುವವರೆಗೆ ಕಾಯಬೇಕೇ ಎಂದೂ ಕೇಳಿದ್ದರು. ಬೆಂಗಳೂರಿನಿಂದ ಕಾರು ಮಾಡಿಕೊಂಡು ಬಂದರೂ ರಾತ್ರಿಯೊಳಗೆ ಬರಲಿಕ್ಕಾಗಲಿಕ್ಕಿಲ್ಲ. ಅಂದರೆ ನಾಳೆ ಬೆಳಿಗ್ಗಿನವರೆಗೆ ಕಾಯಬೇಕಾದೀತು. ಈಗಲೇ ಹೆಣ ವಾಸನೆ ಬೀರಲಿಕ್ಕೆ ಪ್ರಾರಂಭವಾಗಿದೆ. ಎಷ್ಟು ಹೊತ್ತಿಗೆ ಸಾವು ಸಂಭವಿಸಿತ್ತೋ ಏನೋ... ಜನ ಅವಸರ ಮಾಡಿದ್ದರು. ಇವ ಅಲ್ಲವೆನ್ನಲಿಲ್ಲ. `ಅಷ್ಟು ಗಟ್ಟಿ ಮುಟ್ಟಾಗಿದ್ದ ಇವನಿಗೇ ಹಾರ್ಟ್ ಫೈಲ್ ಆಯಿತೆಂದ ಮೇಲೆ ನಮ್ಮದೆಲ್ಲ ಏನು ಕಥೆ ಮಾರಾಯಾ' ಎನ್ನುತ್ತ ಅವರವರೊಳಗೇ ಮಾತಾಡಿ ಕೊಳ್ಳುತ್ತ ಅವರೇ ಮುಂದೆ ನಿಂತು ಕೆಲಸವನ್ನೆಲ್ಲ ಮುಗಿಸಿ ಹೆಣವನ್ನು ಸುಟ್ಟೂ ಬಿಟ್ಟಿದ್ದರು.

* * *

ಐವತ್ತೈದನ್ನು ಮೊನ್ನೆ ಮೊನ್ನೆಯಷ್ಟೆ ಕಳೆದ ಅಪ್ಪ ಜನ ಹೇಳುತ್ತಿದ್ದಂತೆ ಗಟ್ಟಿ ಮುಟ್ಟಾಗಿಯೇ ಇದ್ದರು. ತಾವು  ಅಣ್ಣ ತಮ್ಮಂದಿರಿಬ್ಬರು ಅಪ್ಪನ ಜೊತೆಯಲ್ಲಿ ಹೋಗುತ್ತಿದ್ದರೆ ಯಾರೂ ಇವರನ್ನು ಅಪ್ಪ ಮಕ್ಕಳೆಂದರೆ ನಂಬುತ್ತಿರಲಿಲ್ಲ. ಮೂವರೂ ಅಣ್ಣ ತಮ್ಮಂದಿರೆಂದೇ ಹೇಳುತ್ತಿದ್ದರು. ಹಾಗಿದ್ದರು ಅಪ್ಪ. ಎರಡನೆ ಹೆರಿಗೆಯಲ್ಲಿ ಅಮ್ಮ ಸತ್ತಿದ್ದಳು. ಹಳ್ಳಿ ಊರು. ದುಡ್ಡಿದ್ದರೂ ಸೌಕರ್ಯವಿರಲಿಲ್ಲ. ಇಪ್ಪತ್ತೈದು ಮೈಲಿ ದೂರದ ಪೇಟೆಗೆ ಕರೆದುಕೊಂಡು ಹೋಗುವಷ್ಟು ವ್ಯವಧಾನ ಮತ್ತು ಪರಿಜ್ಞಾನವೂ ಇರಲಿಲ್ಲ. ಅದೂ ಆಗ ಇದ್ದ ಆ ಜೀಪಿನಲ್ಲಿ ಕೊರಕಲು ರಸ್ತೆಯಲ್ಲಿ ಕರೆದುಕೊಂಡು ಹೋಗುವಾಗ ದಾರಿಯಲ್ಲೇ ಹೆರಿಗೆಯಾದರೂ ಆದೀತು ಎಂದು ಹೆದರಿ ಪಕ್ಕದ ಊರ ಅನುಭವಿ ಸೂಲಗಿತ್ತಿಯನ್ನೇ ನಂಬಿದ್ದರು. ಅದೇ ಬಂದದ್ದು ತೊಂದರೆ. ಮಗುವನ್ನೇನೋ ಸುಸೂತ್ರವಾಗಿ ಹೊರಬರುವಂತೆ ಮಾಡಿದ ಆ ಮುದುಕಿಗೆ ಆಗಲೇ ಏದುಸಿರು ಬಿಡುತ್ತ ಮಲಗಿದ್ದ ತಾಯಿಗೆ ಏನು ಮಾಡಬೇಕೆಂದು ತೋಚದೇ ಮನೆ ಕೆಲಸದವಳ ಹತ್ತಿರ ಬಿಸಿನೀರು ಕಾಯಿಸಿ ತೆಗೆದುಕೊಂಡು ಬಾ ಎಂದು ತಲೆ ಮೇಲೆ ಕೈಹೊತ್ತು ಕುಳಿತರೆ ಬಿಸಿನೀರು ಬರುವುದರೊಳಗೆ ಅಮ್ಮ ಕೊನೆಯುಸಿರೆಳೆದಿದ್ದಳು. ತನಗಾಗ ಮೂರು ವರ್ಷ.

ಇಪ್ಪತ್ತ ಮೂರಕ್ಕೇ ಮದುವೆ ಮಾಡಿಕೊಂಡಿದ್ದ ಅಪ್ಪನಿಗೆ ಆಗ ಇಪ್ಪತ್ತೇಳೋ ಇಪ್ಪತ್ತೆಂಟೋ. ದೂರದ ಸಂಬಂಧದ ಮುದುಕಿಯೊಂದು ಮಗುವನ್ನು ನೋಡಿ ಕೊಳ್ಳಲು ಬಂದರೂ ಆ ಹಸುಗೂಸು ಬೆಳೆದದ್ದು ಅಪ್ಪನ ಕೈಯ್ಯಲ್ಲೇ. ಆ ಮಗುವಿನ ಜೊತೆಯಲ್ಲಿ ಅಪ್ಪ ತನ್ನನ್ನೂ ಸಾಕಿದ್ದರು. ಶ್ರೀಮಂತಿಕೆಯಿತ್ತು. ಆಳು ಕಾಳುಗಳ ಸೌಕರ್ಯವಿತ್ತು. ಆದರೂ ಅಪ್ಪ ಮರು ಮದುವೆಗೆ ಒಪ್ಪಿರಲಿಲ್ಲ. `ಯಾಕಪ್ಪಾ.. ಮಕ್ಕಳನ್ನು ನೋಡಿಕೊಳ್ಳಲಾದರೂ ಒಂದು ಹೆಣ್ಣು ಅಂತ ಬೇಡವೇ? ಇಷ್ಟೊಂದು ಆಸ್ತಿ ಬೇರೆ ಇದೆ. ಯಾರೂ ಕರೆದು ಹೆಣ್ಣು ಕೊಟ್ಟಾರು ಆದರೆ ಅಪ್ಪ ನೇರವಾಗಿ ಹೇಳಿದ್ದರು ಅದೇ ತೊಂದರೆ. ಈ ಆಸ್ತಿಯ ಆಸೆಗೆ ನನ್ನ ಈ ಎರಡು ಮಕ್ಕಳಿಗೆ ಏನಾದರೂ ಮಾಡಿದರೆ? ಅಪ್ಪ ನಮ್ಮಿಬ್ಬರನ್ನು ಎದೆಗವಚಿಕೊಂಡು ಹೇಳಿದ್ದು ಈ ಮಗನಿಗೆ ಇನ್ನೂ ನೆನಪಿದೆ. ಆಗ ಪೂರ್ತಿಯಾಗಿ ಅರ್ಥವಾಗದಿದ್ದರೂ ದೊಡ್ಡವನಾಗುತ್ತ ಬಂದಂತೆ ಅರ್ಥವಾಗಿತ್ತು.

ಅಂತಹ ಅಪ್ಪ ಇಂತಹ ಸಾವಿಗೆ ಏಕೆ ಮನಸ್ಸು ಮಾಡಿದರು ಎಂದು ಅರ್ಥವಾಗಲಿಲ್ಲ ಅವನಿಗೆ. ತನಗೆ ಮತ್ತು ತನ್ನ ತಮ್ಮನಿಗಾಗಿ ಇನ್ನೊಂದು ಮದುವೆಯನ್ನೂ ಮಾಡಿಕೊಳ್ಳದ ಅಪ್ಪ ನಂತರದ ದಿನಗಳಲ್ಲಿ ದುಡಿದದ್ದೆಷ್ಟು! ಆಗಲೇ ಸಾಕಷ್ಟಿದ್ದ ಅಡಿಕೆ ತೋಟವನ್ನು ವಿಸ್ತರಿಸಿ ಇಪ್ಪತ್ತೆಕರೆ ಮಾಡಿದ್ದರು. ಕೆಲಸದವರೊಂದಿಗೆ ಕೆಲಸದವರಾಗಿ ದುಡಿದು ಬೆಳೆಸಿದ ತೋಟವನ್ನು ತನ್ನ ಮೂರನೇ ಮಗು ಎನ್ನುತ್ತಿದ್ದರು.

* * *

ಅಪ್ಪನ ಕ್ರಿಯೆಗಳಿಗೆಂದು ಬೆಂಗಳೂರಿನಿಂದ ಬಂದ ತಮ್ಮನೊಂದಿಗೆ ಮೂರನೇ ದಿನದ ಕೆಲಸಗಳನ್ನೆಲ್ಲ ಮುಗಿಸಿ ಮಾತಾಡುತ್ತ ಕುಳಿತಿದ್ದ ಶಂಕರ.

'ಅಲ್ಲ ಚಂದ್ರು.... ಅಪ್ಪ ಈ ಕೆಲಸಕ್ಕೆ ಯಾಕೆ ಎಳಸಿದರು ಗೊತ್ತಾಗುತ್ತಿಲ್ಲ' ಎಂದಿದ್ದ.

`ಏನು ಹೇಳುತ್ತೀಯ.. ಎಂತಹ ಕೆಲಸ..' ಅಪ್ಪ ಆಸ್ತಿ ವಿಲೇವಾರಿಯ ಬಗ್ಗೆ ಏನಾದರೂ ಮಾಡಿದ್ದಾರೆಂದು ಹೇಳುತ್ತಿದ್ದಾನೇನೋ ಎನ್ನುವ ಗುಮಾನಿ ಅವನಿಗೆ.

'ಅಲ್ಲ ಇನ್ನೂ ಐವತ್ತು ವರ್ಷ ಬದುಕುವಷ್ಟು ಗಟ್ಟಿ ಮುಟ್ಟಾಗಿದ್ದ ಅವರು ವಿಷ ಯಾಕೆ ತೆಗೆದುಕೊಂಡರೊ'

ಅವನಿಗೆ ಆಘಾತ. 'ಏನು ಅಪ್ಪ ವಿಷ ತೆಗೆದುಕೊಂಡರೇ.. ಮತ್ತೆ ಹಾರ್ಟ್ ಅಟ್ಯಾಕ್ ಎಂದೆ..'

'ಹೌದು. ಅವರು ಸತ್ತದ್ದು ವಿಷ ತೆಗೆದುಕೊಂಡೇ.. ಆ ದಿನ ಬೆಳಿಗ್ಗೆ ನಾನು ನೋಡುವಾಗ ಅವರ ಬಾಯಿಯಲ್ಲಿ ನೊರೆ ತುಂಬಿತ್ತು. ಮತ್ತು ದೇಹವೂ ನೀಲಿಗಟ್ಟಿತ್ತು. ಇನ್ನು ಎಲ್ಲರಿಗೂ ಗೊತ್ತಾಗಿ ಪೋಲೀಸು ಗೀಲೀಸು ಎಂದು ರಾದ್ಧಾಂತ ಆಗುವುದು ಬೇಡ ಎಂದು ನಾನೇ ಹಾರ್ಟ್ ಅಟ್ಯಾಕ್ ಎಂದು ಹೇಳಿದ್ದು. ಜನ ನೋಡುವ ಮೊದಲೇ ಅವರ ಬಾಯಿಯಲ್ಲಿನ ನೊರೆ ಒರೆಸಿ ಕಣ್ಣು ಮುಚ್ಚಿಸಿದ್ದೂ ನಾನೇ. ಇನ್ನೂ ಕಾದರೆ ಇಡೀ ದೇಹ ನೀಲಿಗಟ್ಟಿ ಬಂದವರಿಗೆಲ್ಲ ಗೊತ್ತಾಗುತ್ತದೆ ಎಂದು ನಿನಗೂ ಕಾಯದೆ ಹೆಣ ಸುಟ್ಟಿದ್ದೂ ಅದಕ್ಕೇ..ಅದೆಲ್ಲ ಹೋಗಲಿ ಅಪ್ಪ ಯಾಕೆ ಇಂತಹ ದುಸ್ಸಾಹಸಕ್ಕೆ ಕೈ ಹಾಕಿದರು ಎನ್ನುವುದೇ ತಿಳಿಯುತ್ತಿಲ್ಲ' ಎಂದು ಶಂಕರ ಅಲವತ್ತುಕೊಂಡಿದ್ದ.

ಅನಿರೀಕ್ಷಿತ ಸಾವು ಅಪ್ಪನದ್ದು. ಮೇಲಿಂದ `ವಿಷ ತೆಗೆದುಕೊಂಡರು ಎನ್ನುವ ಆಘಾತ. ಚಂದ್ರು ಬೆಪ್ಪುಕಟ್ಟಿ ಹೋಗಿದ್ದ.

`ಯಾಕಣ್ಣ... ಅಪ್ಪ ವಿಷ ತಗಂಡರು... ಅಂತಹುದೇನಾಗಿತ್ತು ಅವರಿಗೆ?'

`ಅದೇ ನನಗೂ ತಿಳಿಯುತ್ತಿಲ್ಲ'

* * *

ಚಂದ್ರುಗೆ ಅಪ್ಪನ ಮೇಲಿದ್ದ ಪ್ರೀತಿಯಷ್ಟೆ ಅಣ್ಣನ ಮೇಲೆ ಅಭಿಮಾನ. ಚಿಕ್ಕಂದಿನಿಂದಲೂ ಒಟ್ಟಿಗೇ ಬೆಳೆದಿದ್ದ ಅವರು ಅಣ್ಣ ತಮ್ಮ ಎನ್ನುವುದಕ್ಕಿಂತ ಸ್ನೇಹಿತರಂತೆಯೇ ಇದ್ದವರು. ಆ ಅಣ್ಣನಿಗೂ ತಮ್ಮನ ಮೇಲೆ ಅಷ್ಟೊಂದು ಪ್ರೀತಿ. ಎಸ್ಸೆಸ್ಸೆಲ್ಸಿಗೇ ವಿದ್ಯೆಯನ್ನು ಮುಗಿಸಿದ ತಾನು ತಮ್ಮನನ್ನು ಮಾತ್ರ ಮುಂದೆ ಓದಲು ಒತ್ತಾಯ ಮಾಡಿದ್ದ. ಬೆಂಗಳೂರಿನಲ್ಲಿಟ್ಟು ಓದಿಸಲು ಅಪ್ಪ ಹಿಂದೆ ಮುಂದೆ ನೋಡಿದರೆ ಈ ಅಣ್ಣನೇ ಮುಂದೊತ್ತಿ ಹೋಗಿ ಅಲ್ಲಿ ಹಾಸ್ಟೆಲು ಅದೂ ಇದೂ ವ್ಯವಸ್ಥೆ ಮಾಡಿ ಬಂದಿದ್ದ. ಕಲಿತು ಕೆಲಸಕ್ಕೆ ಹೋಗಬೇಕಾದ ಅಗತ್ಯವೇನೂ ಇಲ್ಲದ ಚಂದ್ರು ಇಂಗ್ಲಿಷ್ ಮೇಜರ್ ಬಿಎ ಮಾಡಿದವ ಮುಂದೆ ಇಂಗ್ಲಿಷ್ ಸಾಹಿತ್ಯದಲ್ಲಿ ಎಂಎ ಮಾಡಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಬರೆಯುವ ಹವ್ಯಾಸವನ್ನೂ ಬೆಳೆಸಿಕೊಂಡಿದ್ದ.

ಈಗ ಬೆಂಗಳೂರಿನಲ್ಲಿ ಒಂದು ಕಡೆ ರೂಮ್ ಮಾಡಿಕೊಂಡು ಇದ್ದಾನೆ. ಒಂದು ಸಂಜೆ ಕಾಲೇಜಿನಲ್ಲಿ ವಾರಕ್ಕೆ ಇಪ್ಪತ್ತು ಗಂಟೆ ಪಾಠ ಹೇಳುತ್ತ ತನ್ನ ಖರ್ಚಿಗೆ ಬೇಕಾಗುವಷ್ಟು ಸಂಪಾದಿಸುತ್ತ ಹಗಲಿಡೀ ತನ್ನ ಹವ್ಯಾಸವಾದ